ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 05/12/201

## ಹುಣಸಮಾರನಹಳ್ಳಿ, ಸೊಣ್ಣಪ್ಪನಹಳ್ಳಿ ಗ್ರಾಮ ಪಂಚಾಯಿತಿಗಳು ಮೇಲ್ದರ್ಜೆಗೆ

# ಪುರಸಭೆ ರಚನೆಗೆ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಹುಣಸಮಾರನಹಳ್ಳಿ ಹಾಗೂ ಸೊಣ್ಣಪ್ಪನಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಪುರಸಭೆಯನ್ನಾಗಿ ಮಾರ್ಪಡಿಸಿ, ಮೇಲ್ದರ್ಜೆಗೇರಿಸುವ ಸಂಬಂಧ ನಗರಾಭಿವೃದ್ಧಿ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಅಂತರರಾಷ್ಟ್ರೀಯ ವಿಮಾನನಿಲ್ದಾಣ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಈ ಎರಡೂ ಗ್ರಾಮ ಪಂಚಾಯಿತಿಗಳನ್ನು ವಿಲೀನಗೊಳಿಸಿ, ಹುಣಸಮಾರನಹಳ್ಳಿ ಪುರಸಭೆ ರಚನೆಯಾಗಲಿದೆ.

ಹುಣಸಮಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಹುಣಸಮಾರನ ಹಳ್ಳಿ, ಕೋಡಗಲಹಟ್ಟಿ ಹಾಗೂ ಭಾರತಿ ನಗರ ಗ್ರಾಮಗಳು ಒಳಪಡಲಿದ್ದು, ಇಲ್ಲಿನ ಜನಸಂಖ್ಯೆಯು 2011ರ ಜನಗಣತಿ ಪ್ರಕಾರ 13.389 ಆಗಿದ್ದು, ಪ್ರಸ್ತುತ ಜನಸಂಖ್ಯೆಯು ದ್ವಿಗುಣಗೊಂಡಿರಬಹುದೆಂದು ಅಂದಾಜಿಸಲಾಗಿದೆ. ವಾರ್ಷಿಕ ಸುಮಾರು ಒಂದು ಕೋಟಿಯಷ್ಟು ತೆರಿಗೆ ಸಂಗ್ರಹವಾಗುತ್ತಿದ್ದು, ಹಸಿರು ವಲಯದಿಂದ ಕೂಡಿದ ಪಂಚಾಯಿತಿಯಾಗಿದೆ.



ಸೊಣ್ಣಪ್ಪನಹಳ್ಳಿ ಗ್ರಾಮ ಪಂಚಾಯಿತಿ ಕಚೇರಿ ಕಟ್ಟಡ

ಸೊಣ್ಣಪ್ಪನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೊಣ್ಣಪ್ಪನಹಳ್ಳಿ, ಬಿಲ್ಲಮಾರನಹಳ್ಳಿ ಹಾಗೂ ಕಾಡಿಗಾನಹಳ್ಳಿ ಗ್ರಾಮಗಳು ಒಳಪಡಲಿದ್ದು, ಹಿಂದಿನ ಜನಸಂಖ್ಯೆಯು 10,970 ಆಗಿದ್ದು, ಪ್ರಸ್ತುತ ಜನಸಂಖ್ಯೆಯು 30 ಸಾವಿರ ದಾಟಿರಬಹುದೆಂದು ಅಂದಾಜಿಸಲಾಗಿದೆ. ಇಲ್ಲಿ ಶೇ 90 ರಷ್ಟು ಭೂಪರಿವರ್ತನೆಯಾಗಿರುವ ಬಡಾವಣೆಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳು, ವಿಲ್ಲಾಗಳು ಹಾಗೂ ವಾಣಿಜ್ಯ ಕಟ್ಟಡಗಳು ತಲೆಯೆತ್ತಿವೆ. ವಾರ್ಷಿಕ ₹2.53 ಕೋಟಿ ತೆರಿಗೆ ಸಂಗ್ರಹವಾಗುತ್ತಿದ್ದು, ಈ 6 ಗ್ರಾಮಗಳು ನೂತನ ಪುರಸಭೆಗೆ ಸೇರ್ಪಡೆಯಾಗಲಿವೆ.

ನೂತನವಾಗಿ ಸೇರ್ಪಡೆಯಾಗಿರುವ ಗ್ರಾಮಗಳು ಈಗಾಗಲೇ ಬಹುತೇಕ ನಗರೀಕರಣಗೊಂಡಿವೆ. ಇಲ್ಲಿಯವರೆಗೆ ಗ್ರಾಮ ಪಂಚಾಯಿತಿಗೆ ನಿರೀಕ್ಷಿತ ಮಟ್ಟದಲ್ಲಿ ತೆರಿಗೆ ಸಂಗ್ರಹವಾಗದೆ ಮೂಲಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ, ಪುರಸಭೆಯಾಗಿ ಮೇಲ್ದರ್ಜೆಗೇರಿದ ನಂತರ ಹೆಚ್ಚಿನ ಅನುದಾನ ಹರಿದುಬರುವ ಮೂಲಕ ಜನರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲು ಸಾಧ್ಯವಾಗಲಿದೆ. ಅಲ್ಲದೆ ಆಸ್ತಿಗಳ ದರವೂ ಹೆಚ್ಚಾಗಲಿದೆ.

## 'ಹೆಚ್ಚಿನ ಅನುದಾನ ಸಿಗಲಿದೆ'

ಗ್ರಾಮಪಂಚಾಯಿತಿಯನ್ನು ಪುರಸಭೆಯನ್ನಾಗಿ ಮಾರ್ಪಡಿಸುತ್ತಿರುವುದು ಸಂತಸದ ವಿಚಾರವಾಗಿದ್ದು, ಇದರಿಂದ ಹೆಚ್ಚಿನ ಅನುದಾನಗಳನ್ನು ತರಲು ಸಾಧ್ಯವಾಗುತ್ತದೆ. ಅಲ್ಲದೆ ಪಕ್ಷದ ಚಿಹ್ನೆಯಲ್ಲಿ ಸ್ಪರ್ಧಿಸುವುದರಿಂದ ಪಕ್ಷದಲ್ಲೂ ಗುರುತಿಸಿಕೊಳ್ಳಲು ಅವಕಾಶವಾಗಲಿದೆ. ಅಂತರರಾಷ್ಟ್ರೀಯ ವಿಮಾನನಿಲ್ದಾಣ ಮತ್ತು ಬೆಂಗಳೂರು ಹತ್ತಿರವಿರುವುದರಿಂದ ಆಸ್ತಿಗಳ ಮೌಲ್ಯ ಹೆಚ್ಚಳವಾಗುವುದರ ಜೊತೆಗೆ ಬಿ ಖಾತಾ ದೊರೆತು, ಅಭಿವೃದ್ಧಿಗೆ ಸಹಕಾರಿಯಾಗಲಿದೆ.

**ಎಚ್.ಬಿ.ಹರೀಶ್ ಕುಮಾರ್,**
ಮಾಜಿ ಅಧ್ಯಕ್ಷ, ಹುಣಸಮಾರನಹಳ್ಳಿ ಗ್ರಾಮಪಂಚಾಯಿತಿ.

## 'ಅಭಿವೃದ್ಧಿಗೆ ವೇಗ'

ಪುರಸಭೆಯಾಗುವುದರಿಂದ ರಸ್ತೆ, ನೀರು ಮತ್ತಿತರ ಮೂಲಸೌಕರ್ಯಗಳು ಮೇಲ್ದರ್ಜೆಗೇರಲಿದ್ದು, ಜನರಿಗೆ ಅನುಕೂಲವಾಗಲಿದೆ. ಆಸ್ಪತ್ರೆಗಳು ಸುಧಾರಣೆಯಾಗುವುದರಿಂದ ಆರೋಗ್ಯಸೇವೆಯೂ ಉತ್ತಮಗೊಳ್ಳುತ್ತದೆ. ಹೆಚ್ಚಿನ ತೆರಿಗೆ ಸಂಗ್ರಹವಾಗಿ ಅಭಿವೃದ್ಧಿಯಾಗಲು ಸಾಧ್ಯವಾಗಲಿದೆ. ಸೊಣ್ಣಪ್ಪನಹಳ್ಳಿಯಲ್ಲಿ ಪುರಸಭೆ ಕಚೇರಿ ಕಟ್ಟಡ ನಿರ್ಮಿಸಲು ಜಾಗವಿರುವುದರಿಂದ ಇಲ್ಲಿಯೇ ನಿರ್ಮಿಸಿದರೆ ಭವಿಷ್ಯದಲ್ಲಿ ಹೆಚ್ಚಿನ ಅನುಕೂಲವಾಗಲಿದೆ.

**ಎಸ್.ಎಸ್.ಗಂಗರಾಜು,** ಸೊಣ್ಣಪ್ಪನಹಳ್ಳಿ ಗ್ರಾಮದ ನಿವಾಸಿ